# 'ಪರಿ' ಪಂಚಾಮೃತ

**ತಾರುಣ್ಯದ** ಆಸುಪಾಸಿನಲ್ಲಿರುವ ಜಾಣ ಜಾಣೆಯರನ್ನು ಗಮನದಲ್ಲಿಟ್ಟುಕೊಂಡು 'ಕರಡಿ ಟೇಲ್ಸ್' ಸಂಸ್ಥೆ ಪ್ರಕಟಿಸಿರುವ 'ಪರಿ' ಸರಣಿಯ ಐದು ಪುಸ್ತಕಗಳು 'ಬಹುರೂಪಿ' ಪ್ರಕಾಶನದ ಮೂಲಕ ಕನ್ನಡಕ್ಕೆ ಬಂದಿವೆ. ಸ್ಫೂರ್ತಿದಾಯಕ ವ್ಯಕ್ತಿತ್ವಗಳ ಪರಿಚಯ ಕಥನಗಳ ಮೂಲಕ ಗ್ರಾಮೀಣ ಭಾರತವನ್ನು ಯುವ ಓದುಗರಿಗೆ ಪರಿಚಯಿಸುವ ಉದ್ದೇಶ 'ಪರಿ' ಸರಣಿಯದ್ದಾಗಿದೆ.

ಕನ್ನಡಕ್ಕೆ ಬಂದಿರುವ ಐದೂ ಪುಸ್ತಕಗಳ ಕೇಂದ್ರದಲ್ಲಿರುವುದು ಸಾಮಾನ್ಯ ಹುಡುಗ ಹುಡುಗಿಯರು. ಯಾವುದಾದರೊಂದು ಸಮಸ್ಯೆಯಿಂದ ಬಳಲುತ್ತಿರುವ ಈ ಯುವ ಮನಸ್ಸುಗಳು, ಅಸಹಾಯಕತೆಯಿಂದ ಹೊರಬರುವುದಕ್ಕೆ ಕಠಿಣ ಪ್ರಯತ್ನಗಳನ್ನು ನಡೆಸುತ್ತವೆ ಹಾಗೂ ಆ ಪ್ರಯತ್ನದಲ್ಲಿ ಯಶಸ್ಸು ಪಡೆಯುತ್ತವೆ. ಆ ಯಶಸ್ಸು ಏಕರೂಪಿ ಅಲ್ಲದೆ ಹೋದರೂ, ಬದುಕಿನ ಬಗ್ಗೆ ಭರವಸೆಗಳನ್ನು ಮೂಡಿಸುವಂತಹದ್ದು.

'ಪರಿ' ಕಥನಗಳ ವಿಶೇಷ ಇರುವುದು ಮಕ್ಕಳ ಸಾಹಿತ್ಯದ ಸಿದ್ಧಸೂತ್ರಗಳನ್ನು ಒಳಗೊಂಡೇ ಭಿನ್ನವಾಗಲು ಪ್ರಯತ್ನಿಸಿರುವುದರಲ್ಲಿ ಹಾಗೂ ದುರ್ಬಲ ಮಕ್ಕಳನ್ನೇ ನಾಯಕ ನಾಯಕಿಯಾಗಿಸಿರುವುದರಲ್ಲಿ. ಕುಟುಂಬದ ಆರ್ಥಿಕ ಸಂಕಷ್ಟಗಳು ಹಾಗೂ ಸಾಮಾಜಿಕ ಅಡೆತಡೆಗಳನ್ನು ಮೀರಿ ಆಟದಲ್ಲೋ ಪಾಠದಲ್ಲೋ ಯಶಸ್ಸು ಸಾಧಿಸುವ ಮಕ್ಕಳ ಕಥನಗಳು ಕನ್ನಡಕ್ಕೆ ಹೊಸತೇನಲ್ಲ. ಏಕತಾನತೆಯಿಂದ ಬಳಲುವ ಈ ಕಥನಗಳು, ಸಾಹಿತ್ಯದ ಹೆಸರಿನಲ್ಲಿ ಮಕ್ಕಳಿಗೆ ಮತ್ತಷ್ಟು ಸಂಕಷ್ಟವನ್ನೇ ದಾಟಿಸುವ ಪ್ರಯತ್ನಗಳಂತೆ ಕಾಣಿಸುವುದೂ ಇದೆ. 'ಪರಿ' ಸರಣಿಯ ಕಥೆಯಲ್ಲೂ ಇಂಥ ಸಂಕಷ್ಟಗಳಿವೆ. ಆದರೆ, ಆ ಸಂಕಷ್ಟಗಳನ್ನು ಮೀರಿದ ಜೀವನಪ್ರೀತಿ ಮಕ್ಕಳ ಮನಸ್ಸಿನಲ್ಲುಳಿಯುವಂತಾಗುವುದು ಈ ಕೃತಿಗಳ ವಿಶೇಷ.

ನಿಜ ಜೀವನದ ಪಾತ್ರ-ಘಟನೆಗಳು ಕಥೆಗಾರರ ಕಲ್ಪನಾಶಕ್ತಿಯಲ್ಲಿ ಮತ್ತಷ್ಟು ರೆಕ್ಕೆಪುಕ್ಕ ಕಟ್ಟಿಕೊಂಡು ಗಮನಾರ್ಹ ಕಥೆಗಳಾಗಿವೆ. 'ಗೆದ್ದೇ ಬಿಟ್ಟೆ' ಎನ್ನುವ ಕಥೆ ನೋಡಿ. ದಿವ್ಯಾ ಎನ್ನುವ ಹುಡುಗಿಗೆ ಕೈ ಊನ. ಸಿಡುಕು ಸ್ವಭಾವದ ದಿವ್ಯಾ, ದೇಶ ಮೆಚ್ಚುವ ಈಜುಪಟುವಾಗುವುದರ







